# ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು

ಜೆ.ಎಲ್.ಬಿ. ರಸ್ತೆ, ಅಶೋಕ ವೃತ್ತದ ಹತ್ತಿರ
ಲಕ್ಷ್ಮೀಪುರಂ, ಮೈಸೂರು-570 004.
ದೂರವಾಣಿ: 0821-4535020,
Email :musicuniversitymys@gmail.com

J.L.B. Road, Near Ashoka Circle
Lakshmipuram, Mysuru – 570 004.
Ph.Office: 0821-4535020
Website: https://www.musicuniversity.ac.in


ಸಂಖ್ಯೆ:ಕೆಎಸ್‌ಜಿಎಚ್/ಸಂಪ್ರಕವಿ/389 /2024-25

ದಿನಾಂಕ: 15.02.2025

## ಅಧಿಸೂಚನೆ

**ವಿಷಯ:-** ಏಪ್ರಿಲ್ –ಮೇ 2025ರ ಮಾಹೆಯಲ್ಲಿ ನಡೆಯಲಿರುವ ವಿಶೇಷ ಸಂಗೀತ ನೃತ್ಯ ಹಾಗೂ ತಾಳವಾದ್ಯ ಜೂನಿಯರ್, ಸೀನಿಯರ್ ಹಾಗೂ ವಿದ್ವತ್ ಪರೀಕ್ಷೆಗಳಿಗೆ ಅಭ್ಯರ್ಥಿಗಳಿಂದ ನೋಂದಣಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

**ಉಲ್ಲೇಖ:-** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 13.02.2025

*******

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ಏಪ್ರಿಲ್ –ಮೇ 2025ರ ಮಾಹೆಯಲ್ಲಿ ನಡೆಯಲಿರುವ ವಿಶೇಷ ಸಂಗೀತ (ಕರ್ನಾಟಕ/ಹಿಂದೂಸ್ಥಾನಿ), ಭರತನಾಟ್ಯ, ಕೂಚುಪುಡಿ, ಕಥಕ್ ಮತ್ತು ತಾಳವಾದ್ಯ (ಕರ್ನಾಟಕ/ಹಿಂದೂಸ್ಥಾನಿ) ಜೂನಿಯರ್, ಸೀನಿಯರ್ ಹಾಗೂ ವಿದ್ವತ್ ಪರೀಕ್ಷೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಕರ್ನಾಟಕ ರಾಜ್ಯದ ವ್ಯಾಪ್ತಿಗೆ ಒಳಪಟ್ಟಂತೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಪರೀಕ್ಷೆಗೆ ಹಾಜರಾಗಲು ಅರ್ಹ ಅಭ್ಯರ್ಥಿಗಳು ತಮ್ಮ ವಿವರಗಳನ್ನು ವಿಶ್ವ ವಿದ್ಯಾಲಯದ ಜಾಲತಾಣ **(Website: https://www.musicuniversity.ac.in)** ನಲ್ಲಿ ನೋಂದಣಿ ಮಾಡಿಕೊಳ್ಳುವುದು.

**ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆ ತೆಗೆದುಕೊಳ್ಳಲು ಅಗತ್ಯವಿರುವ ಅರ್ಹತೆಗಳು**

- ಪಠ್ಯಕ್ರಮದಂತೆ ಕಿರಿಯ ದರ್ಜೆ ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳಿಗೆ ದಿನಾಂಕ: ಏಪ್ರಿಲ್ –ಮೇ 2025ಕ್ಕೆ 10 ವರ್ಷ ತುಂಬಿರಬೇಕು.

- ಯಾವುದೇ ಹಿರಿಯ ದರ್ಜೆಯ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಕಿರಿಯ ದರ್ಜೆಯ ಪರೀಕ್ಷಾ ನೋಂದಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿ ಅರ್ಜಿ ಸಲ್ಲಿಸಬೇಕು.

- ಹಿರಿಯ ದರ್ಜೆಗೆ ಅರ್ಜಿ ಸಲ್ಲಿಸಲು ಕಿರಿಯ ದರ್ಜೆಯಲ್ಲಿ ಉತ್ತೀರ್ಣರಾಗಿ ಮೂರು ವರ್ಷಗಳಾಗಿರಬೇಕು ಅಥವಾ ಅಭ್ಯರ್ಥಿಗೆ 17 ವರ್ಷ ತುಂಬಿದ್ದು ಸಂಗೀತ/ನೃತ್ಯ/ತಾಳವಾದ್ಯ ವಿಷಯಗಳನ್ನು ಐಚ್ಛಿಕವಾಗಿ ವ್ಯಾಸಂಗ ಮಾಡಿ ಪದವಿ ಪೂರ್ವ (ಪಿ.ಯು.ಸಿ) ಶಿಕ್ಷಣ ಇಲಾಖೆ ನಡೆಸುವ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದರೆ ನೇರವಾಗಿ ಹಿರಿಯ ದರ್ಜೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿದೆ. **ನೇರವಾಗಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು** ಸಂಗೀತ ವಿಶ್ವವಿದ್ಯಾಲಯದಲ್ಲಿ **ಸಂಪರ್ಕಿಸಿ ಅನುಮತಿ ಪಡೆದು ನಂತರ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.**

- ವಿದ್ವತ್‌ಪೂರ್ವ ದರ್ಜೆಗೆ ಅರ್ಜಿ ಸಲ್ಲಿಸಲು ಹಿರಿಯ ದರ್ಜೆಯಲ್ಲಿ ಉತ್ತೀರ್ಣರಾಗಿ 3 ವರ್ಷಗಳಾಗಿರಬೇಕು .

- ವಿದ್ವತ್‌ಪೂರ್ವ ಪರೀಕ್ಷೆ ಉತ್ತೀರ್ಣರಾದ ನಂತರ ವಿದ್ವತ್ ಅಂತಿಮ ಪರೀಕ್ಷೆ ತೆಗೆದುಕೊಳ್ಳಬಹುದು.

- ಅಭ್ಯರ್ಥಿಯು ಒಂದು ಬಾರಿಗೆ ಎರಡು ಪರೀಕ್ಷೆಗಳನ್ನು ಒಟ್ಟಿಗೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ. ಯಾವುದೇ ಕಾರಣದಿಂದಲೂ ಒಬ್ಬ ಅಭ್ಯರ್ಥಿ ಹಾಡುಗಾರಿಕೆ ಹಾಗೂ ವಾದ್ಯಸಂಗೀತ ಎರಡೂ ಪರೀಕ್ಷೆಗಳಿಗೆ ಒಂದೇ ವರ್ಷದಲ್ಲಿ ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ. ಅಂತೆಯೇ ಹಾಡುಗಾರಿಕೆ ಅಥವಾ ವಾದ್ಯ ಸಂಗೀತದ ಪರೀಕ್ಷೆಯೊಂದಿಗೆ ತಾಳವಾದ್ಯ ಮತ್ತು ನೃತ್ಯದ ಪರೀಕ್ಷೆಗಳಿಗೆ ಜೊತೆಯಲ್ಲಿಯೇ ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ.

**ಅಭ್ಯರ್ಥಿಗಳು ಪರೀಕ್ಷಾ ನೋಂದಣಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ವಿಧಾನ**

1. ಅಭ್ಯರ್ಥಿಗಳು ಪರೀಕ್ಷಾ ನೋಂದಣಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ವಿಶ್ವವಿದ್ಯಾಲಯದ ಜಾಲತಾಣ www.musicuniversity.ac.in ದಲ್ಲಿ ಅವಕಾಶ ಕಲ್ಪಿಸಲಾಗಿದೆ.

2. **ಅಭ್ಯರ್ಥಿಗಳು ತಮ್ಮ ವಿವರಗಳನ್ನು ಆನ್‌ಲೈನ್ ಮೂಲಕ ಯಾವುದೇ ತಪ್ಪುಗಳು ಇಲ್ಲದಂತೆ ನಮೂದಿಸಬೇಕು.**

3. **ಅಭ್ಯರ್ಥಿಯು ತಾನು ಅಭ್ಯಾಸ ಮಾಡುತ್ತಿರುವ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಶಿಕ್ಷಕರು/ ಪರೀಕ್ಷಕರು ವಿಶ್ವವಿದ್ಯಾಲಯದಲ್ಲಿ ನೋಂದಣಿ ಮಾಡಿಕೊಂಡ ನಂತರ ಆನ್ ಲೈನ್‌ನಲ್ಲಿ ಜನರೇಟ್ ಆಗುವ ಮೌಲ್ಯಮಾಪಕರ ನೋಂದಣಿ ಸಂಖ್ಯೆಯನ್ನು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಕಡ್ಡಾಯವಾಗಿ ನಮೂದಿಸಬೇಕು. ಅಭ್ಯರ್ಥಿಗಳು ನಮೂದಿಸದಿದ್ದಲ್ಲಿ ಅಂತಹ ಅಭ್ಯರ್ಥಿಗಳ ಆನ್‌ಲೈನ್ ಅರ್ಜಿ ಸಿಂಧು ಆಗುವುದಿಲ್ಲ.**

4. ಅಭ್ಯರ್ಥಿಗಳ ವಯಸ್ಸಿನ ಬಗ್ಗೆ ದೃಢೀಕರಣಕ್ಕಾಗಿ ಜನನ ಪ್ರಮಾಣ ಪತ್ರ/ಎಸ್.ಎಸ್.ಎಲ್.ಸಿ ಅಂಕಪಟ್ಟಿ/ವರ್ಗಾವಣೆ ಪ್ರಮಾಣ ಪತ್ರ/ಆಧಾರ್ ಕಾರ್ಡ್ ಮೂಲದಾಖಲಾತಿಗಳನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ.

5. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕದಲ್ಲಿ ಆಂಶಿಕ ವಿನಾಯಿತಿ ಇದೆ. ಪರೀಕ್ಷಾ ಶುಲ್ಕದಿಂದ ವಿನಾಯತಿ ಪಡೆಯಲು ಈ ವರ್ಗದ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ಜಾತಿ ಪ್ರಮಾಣಪತ್ರದ ಆರ್.ಡಿ. ನಂಬರನ್ನು ಆನ್‌ಲೈನ್ ನಲ್ಲಿ ದಾಖಲಿಸಬೇಕು. ಹಾಗೂ ಸಂಬಂಧಪಟ್ಟ ಮೂಲದಾಖಲೆಯನ್ನು ಅಪ್‌ಲೋಡ್ ಮಾಡಬೇಕು.

6. ಅಂಗವಿಕಲ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕದಲ್ಲಿ ಆಂಶಿಕ ವಿನಾಯಿತಿ ನೀಡಲಾಗುತ್ತದೆ. ಇಂತಹ ಅಭ್ಯರ್ಥಿಗಳು ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದ ಮೂಲ ಪ್ರಮಾಣಪತ್ರವನ್ನು ಸ್ಕ್ಯಾನ್ ಮಾಡಿ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಬೇಕು.

7. **ಅಭ್ಯರ್ಥಿಗಳು ಆನ್‌ಲೈನ್ ನಲ್ಲಿ ಅಪ್‌ಲೋಡ್ ಮಾಡಬೇಕಾದ ದಾಖಲೆಗಳು**
   - ಪಾಸ್‌ಪೋರ್ಟ್ ಸೈಜ್ ಫೋಟೋ
   - ವಿದ್ಯಾರ್ಥಿಯ ಸಹಿ
   - ಜನನ ಪ್ರಮಾಣ ಪತ್ರ/ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ/ವರ್ಗಾವಣೆ ಪ್ರಮಾಣ ಪತ್ರ
   - ಆಧಾರ್ ಕಾರ್ಡ್
   - ಜಾತಿ ಪ್ರಮಾಣ ಪತ್ರ (ಅಗತ್ಯವಿರುವ ಅಭ್ಯರ್ಥಿಗಳು ಮಾತ್ರ)
   - ಅಂಗವಿಕಲ ಪ್ರಮಾಣ ಪತ್ರ (ಅಗತ್ಯವಿರುವ ಅಭ್ಯರ್ಥಿಗಳು ಮಾತ್ರ)
   - ಶೈಕ್ಷಣಿಕ ಅರ್ಹತಾ ಪತ್ರ

## ಆನ್‌ಲೈನ್ ಮೂಲಕ ಶುಲ್ಕ ಪಾವತಿಸುವ ವಿಧಾನ

1. ಪರೀಕ್ಷಾ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸಲು ಅವಕಾಶ ಕಲ್ಪಿಸಿದ್ದು, Debit Card/Credit Card/Net Banking/UPI ಮೂಲಕ ಶುಲ್ಕ ಪಾವತಿಸಬಹುದು.
2. ಅರ್ಜಿ ಶುಲ್ಕವನ್ನು Debit Card/Credit Card/Net Banking/UPI ಮೂಲಕ ಪಾವತಿಸಬೇಕು. ಚಲನ್/ಡಿ.ಡಿ./ ಚೆಕ್ ಮೂಲಕ ಮಾಡಲಾದ ಪಾವತಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.
3. ಅಭ್ಯರ್ಥಿಗಳ ನೋಂದಣಿಗೆ ಅಂತಿಮ ದಿನಾಂಕ: **15.03.2025**
4. **Fees Payable at :**
   a. **Bank of Baroda**
   b. **Account No: 73820100006352**
   c. **IFSC Code: BARB0VJJLBR (Fifth Character is Numeric Number Zero (0) )**

## ವಿವಿಧ ಪರೀಕ್ಷೆಗಳಿಗೆ ಕೆಳಕಂಡ ವಾದ್ಯಗಳನ್ನು ಮಾತ್ರ ನಿಗದಿಪಡಿಸಿದೆ.

| | |
|---|---|
| ಅ) ಕರ್ನಾಟಕ ಸಂಗೀತ/ ವಾದ್ಯ ಸಂಗೀತ | ವೀಣೆ/ಪಿಟೀಲು/ಕೊಳಲು/ನಾದಸ್ವರ/ಗೋಟುವಾದ್ಯ/ಕ್ಲಾರಿಯೋನೆಟ್/ಮ್ಯಾಂಡಲಿನ್/ಸ್ಯಾಕ್ಸೋಫೋನ್ |
| ಆ) ಹಿಂದುಸ್ತಾನಿ ಸಂಗೀತ/ ವಾದ್ಯ ಸಂಗೀತ | ಪಿಟೀಲು/ಕೊಳಲು/ಬೀನ್/ಸಿತಾರ್/ಷಹನಾಯ್/ದಿಲ್‌ರುಬಾ/ಹಾರ್ಮೋನಿಯಂ/ಮೋಹನ್‌ವೀಣಾ/ರುದ್ರವೀಣಾ/ಸಂತೂರ್/ಸರೋದ್/ಸಾರಂಗಿ |
| ಇ) ಕರ್ನಾಟಕ ತಾಳವಾದ್ಯ | ಮೃದಂಗ/ಖಂಜಿರ/ಘಟಂ/ಮೋರ್ಚಿಂಗ್/ಡೋಲ್/ಡೋಲಕ್ |
| ಈ) ಹಿಂದುಸ್ತಾನಿ ತಾಳ ವಾದ್ಯ | ತಬಲ/ಪಕ್ವಾಜ್/ಡೋಲಕ್ |
| ಉ) ನೃತ್ಯ ವಿಭಾಗ | ಭರತನಾಟ್ಯ, ಕಥಕ್ ಹಾಗೂ ಕೂಚಿಪುಡಿ |

## ಪರೀಕ್ಷಾ ವಿಷಯ ಮತ್ತು ಶುಲ್ಕದ ವಿವರ

| ಕ್ರಮ ಸಂಖ್ಯೆ | ಪರೀಕ್ಷೆಯ ಹೆಸರು | ನೋಂದಣಿ ಶುಲ್ಕ | ಪರೀಕ್ಷಾ ಶುಲ್ಕ | ಒಟ್ಟು ಮೊತ್ತ |
|---|---|---|---|---|
| 1 | ಕಿರಿಯ ದರ್ಜೆ (Junior) | **300/-** | **2000-00** | **2,300-00** |
| 2 | ಹಿರಿಯ ದರ್ಜೆ (Senior) | **300/-** | **3000-00** | **3,300-00** |
| 3 | ವಿದ್ವತ್‌ಪೂರ್ವ (Pre Vidwat) | **300/-** | **3500-00** | **3,800-00** |
| 4 | ವಿದ್ವತ್ ಅಂತಿಮ (Vidwat Final) | **300/-** | **4000-00** | **4,300-00** |

## ಎಸ್.ಸಿ/ಎಸ್.ಟಿ ಮತ್ತು ಅಂಗವಿಕಲ ಅಭ್ಯರ್ಥಿಗಳ ಪರೀಕ್ಷಾ ಶುಲ್ಕ

| ಕ್ರಮ ಸಂಖ್ಯೆ | ಪರೀಕ್ಷೆಯ ಹೆಸರು | ನೋಂದಣಿ ಶುಲ್ಕ | ಪರೀಕ್ಷಾ ಶುಲ್ಕ | ಒಟ್ಟು ಮೊತ್ತ |
|---|---|---|---|---|
| 1 | ಕಿರಿಯ ದರ್ಜೆ (Junior) | 300/- | 1000-00 | 1,300-00 |
| 2 | ಹಿರಿಯ ದರ್ಜೆ (Senior) | 300/- | 1500-00 | 1,800-00 |
| 3 | ವಿದ್ವತ್‌ಪೂರ್ವ (Pre Vidwat) | 300/- | 1750-00 | 2,050-00 |
| 4 | ವಿದ್ವತ್ ಅಂತಿಮ (Vidwat Final) | 300/- | 2000-00 | 2,300-00 |

## ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸಲು ನಿಗಧಿಗೊಳಿಸಿರುವ ದಿನಾಂಕಗಳ ವಿವರ

| ಕ್ರ.ಸಂ | ವಿವರ | ದಿನಾಂಕ |
|---|---|---|
| 1 | ಅಧಿಸೂಚನೆ ಪ್ರಕಟಣೆಯ ದಿನಾಂಕ: | **15.02.2025** |
| 2 | ಅಭ್ಯರ್ಥಿಗಳು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ದಿನಾಂಕ | **17.02.2025 ರಿಂದ 15.03.2025 ರವರೆಗೆ** |
| 3 | ದಂಡ ಶುಲ್ಕ ರೂ.300/-ಗಳೊಂದಿಗೆ ಅರ್ಜಿಗಳನ್ನು ಸಲ್ಲಿಸುವ ದಿನಾಂಕ | **16.03.2025 ರಿಂದ 20.03.2025 ರವರೆಗೆ** |

- ಮೇಲೆ ನಿಗದಿಪಡಿಸಿದ ಅಂತಿಮ ದಿನಾಂಕದ ನಂತರ ಅಭ್ಯರ್ಥಿಗಳು ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.

- **ಪರೀಕ್ಷಾ ಕೇಂದ್ರ ನಿಗದಿಗೆ ಸಾಕಷ್ಟು ಅಭ್ಯರ್ಥಿಗಳು ದಾಖಲಾಗದಿದ್ದರೆ ಅಥವಾ ಇನ್ನಾವುದೇ ಕಾರಣಕ್ಕಾಗಲಿ ರಾಜ್ಯದ ಯಾವುದೇ ಪರೀಕ್ಷಾ ಕೇಂದ್ರವನ್ನು ರದ್ದುಪಡಿಸುವ ಅಥವಾ ಹತ್ತಿರದ ಪರೀಕ್ಷಾ ಕೇಂದ್ರಕ್ಕೆ ವಿಲೀನಗೊಳಿಸುವ ಪೂರ್ಣ ಅಧಿಕಾರವನ್ನು ವಿಶ್ವವಿದ್ಯಾಲಯವು ಹೊಂದಿರುತ್ತದೆ. ಅಭ್ಯರ್ಥಿಯು ಪರೀಕ್ಷಾ ಅರ್ಜಿ ಸಲ್ಲಿಸಿದ ನಂತರ ವಿಷಯ ಅಥವಾ ಕೇಂದ್ರ ಬದಲಾವಣೆಗೆ ಅವಕಾಶವಿರುವುದಿಲ್ಲ.**

- ಶಾಸ್ತ್ರ ಹಾಗೂ ಪ್ರಾಯೋಗಿಕ ಪರೀಕ್ಷಾ ಸಮಯದಲ್ಲಿ ಪರೀಕ್ಷಾ ಕೇಂದ್ರಗಳಲ್ಲಿ ತಾಳ್ಮೆಯಿಂದಿದ್ದು, ಶಾಂತಿಯುತವಾದ ವಾತಾವರಣವನ್ನು ಕಾಪಾಡಲು ಪೋಷಕರಿಗೆ ಸೂಚಿಸಲಾಗಿದೆ. ಹಾಗೂ ಪರೀಕ್ಷೆಗಳು ಸುಗಮವಾಗಿ ಸಕಾಲಕ್ಕೆ ನಡೆಯಲು ಪರೀಕ್ಷಾ ಕೇಂದ್ರದ ಸಿಬ್ಬಂದಿಗೆ ಸಹಕಾರ ನೀಡುವುದು ಪೋಷಕರ ಜವಾಬ್ದಾರಿಯಾಗಿರುತ್ತದೆ.

- **ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ವಿಶೇಷ ವೇಷ ಭೂಷಣ ಇತ್ಯಾದಿಗಳನ್ನು ಧರಿಸುವ ಅಗತ್ಯವಿಲ್ಲ. ಅಭ್ಯಾಸ ಮಾಡಲು ಉಪಯೋಗಿಸುವ ಸಾಮಾನ್ಯ ಉಡುಪನ್ನು ಧರಿಸಲು ಅವಕಾಶ ಕಲ್ಪಿಸಿದೆ.**

- ಪ್ರಾಯೋಗಿಕ ಪರೀಕ್ಷೆಯ ದಿನಾಂಕದಂದು ಸೂಚಿತ ಸಮಯಕ್ಕಿಂತ ಅರ್ಧ ಗಂಟೆ ಮೊದಲು ಹಾಜರಾಗುವುದನ್ನು ಕಡ್ಡಾಯಗೊಳಿಸಿದೆ.

- ಪ್ರಾಯೋಗಿಕ ಪರೀಕ್ಷೆಗೆ ವೇಳಾಪಟ್ಟಿಯನ್ನು ಅಭ್ಯರ್ಥಿಗಳ ಸಂಖ್ಯೆಗನುಗುಣವಾಗಿ ವಿಶ್ವವಿದ್ಯಾಲಯದಿಂದ ನೀಡಲಾಗುವುದು. ಪ್ರಾಯೋಗಿಕ ಪರೀಕ್ಷೆಗೆ ಅಭ್ಯರ್ಥಿಗಳಿಗಳು ಗೊತ್ತುಪಡಿಸಿದ ದಿನಾಂಕದಂದೇ ಕಡ್ಡಾಯವಾಗಿ ಹಾಜರಾಗುವುದು. ಒಂದು ವೇಳೆ ಗೊತ್ತುಪಡಿಸಿದ ದಿನಾಂಕದಂದು ಅಭ್ಯರ್ಥಿ ಪ್ರಾಯೋಗಿಕ ಪರೀಕ್ಷೆಗೆ ಗೈರುಹಾಜರಾದಲ್ಲಿ ಗೈರುಹಾಜರಿ ಎಂದು ನಮೂದಿಸಲಾಗುವುದು. ಅಂತಹ ಅಭ್ಯರ್ಥಿಗಳು ಮುಂದಿನ ವರ್ಷದ ಶೈಕ್ಷಣಿಕ ಸಾಲಿನಲ್ಲಿ ನಡೆಸಲಾಗುವ ಪರೀಕ್ಷೆಗೆ ನೋಂದಾಯಿಸಿ ಹಾಜರಾಗತಕ್ಕದ್ದು.

- ಪ್ರಾಯೋಗಿಕ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಕರು/ ಅಭ್ಯರ್ಥಿಗಳು/ಸಾಥಿದಾರರು ನಿಗದಿತ ಅವಧಿಯಲ್ಲಿ ಪರೀಕ್ಷೆಗೆ ಹಾಜರಾಗುವುದು ಕಡ್ಡಾಯ. ತಡವಾಗಿದೆ ಎಂಬ ಕಾರಣಗಳನ್ನು ನೀಡಿದ್ದಲ್ಲಿ ಪ್ರಾಯೋಗಿಕ ಪರೀಕ್ಷಾ ಸಮಯವನ್ನು ವಿಸ್ತರಿಸಲು ಸಾಧ್ಯವಿಲ್ಲ.

- ಪ್ರಾಯೋಗಿಕ ಪರೀಕ್ಷಾ ಅವಧಿ ಬೆಳಗ್ಗೆ 9.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ ಮುಕ್ತಾಯಗೊಳಿಸಲಾಗುವುದು. ಈ ಅವಧಿಯು ಉಪಹಾರದ ಸಮಯವನ್ನೂ ಒಳಗೊಂಡಿರುತ್ತದೆ.

- ಪೋಷಕರು ಹಾಗೂ ನೋಂದಣಿ ಮಾಡಿಕೊಳ್ಳದ ಶಿಕ್ಷಕರು/ಪರೀಕ್ಷಕರು/ಸಾಥಿದಾರರಿಗೆ ಪರೀಕ್ಷಾ ಕೇಂದ್ರದಲ್ಲಿ ಪ್ರವೇಶವನ್ನು ನಿಷೇಧಿಸಲಾಗಿದೆ.

- ನೃತ್ಯ ವಿಭಾಗದ ವಿದ್ಯಾರ್ಥಿಗಳು ತಮ್ಮ ಶಿಕ್ಷಕರು/ಪರೀಕ್ಷಕರು ಸೂಚಿಸುವ ಪ್ರಾಯೋಗಿಕ ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳುವುದು.

- ಸಂಗೀತ ವಿಭಾಗದ ವಿದ್ಯಾರ್ಥಿಗಳು ಆಯ್ಕೆ ಮಾಡಿದ ಪರೀಕ್ಷಾ ಕೇಂದ್ರದಲ್ಲಿಯೇ ಶಾಸ್ತ್ರಪತ್ರಿಕೆ ಹಾಗೂ ಪ್ರಾಯೋಗಿಕ ಪತ್ರಿಕೆ ಪರೀಕ್ಷೆಗಳು ನಡೆಯುತ್ತದೆ. ಇದರಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

- ಒಮ್ಮೆ ಆಯ್ಕೆ ಮಾಡಿಕೊಂಡ ನಂತರ ಪರೀಕ್ಷಾ ಕೇಂದ್ರಗಳ ಬದಲಾವಣೆಗೆ ಅವಕಾಶವಿರುವುದಿಲ್ಲ.

ಆನ್‌ಲೈನ್‌ನಲ್ಲಿ ಅರ್ಜಿಯನ್ನು ವಿಶ್ವವಿದ್ಯಾಲಯದ ಜಾಲತಾಣ **www.musicuniversity.ac.in** ನಲ್ಲಿ ಲಭ್ಯಗೊಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ **ದೂರವಾಣಿ ಸಂಖ್ಯೆ: 0821- 4535020/ 9480150826** ಕಛೇರಿಯ ಸಮಯದಲ್ಲಿ ಸಂಪರ್ಕಿಸಬಹುದು.

**ಕುಲಸಚಿವರು (ಪರೀಕ್ಷಾಂಗ)**
ಕುಲಸಚಿವರು (ಮೌಲ್ಯಮಾಪನ)
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಮೈಸೂರು-04

**ಪ್ರತಿಗಳು:**

1. ಕುಲಪತಿಗಳು ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು-04
2. ಕುಲಸಚಿವರು/ಕುಲಸಚಿವರು (ಪರೀಕ್ಷಾಂಗ) ವಿಭಾಗ/ಹಣಕಾಸು ಅಧಿಕಾರಿಗಳು ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು-04
3. ಕಛೇರಿ ಪ್ರತಿ.